**ಸಾಕ್ಷಿಯು ದಿಃ 16.06.2025 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: ವಾದಿಪರ ಶ್ರೀ ಹೆಚ್.ವಿ.ಆರ್ ವಕೀಲರಿಂದ**

ನನ್ನ ಸಾಕ್ಷಿ ಪ್ರಮಾಣ ಪತ್ರದ 2ನೇ ಪುಟದ 2ನೇ ಖಂಡಿಕೆಯಲ್ಲಿ ಹೇಳಿರುವಂತೆ ದಾವ ಆಸ್ತಿಯ ಪೂರ್ವ ಭಾಗದಲ್ಲಿ ಉತ್ತರ ದಕ್ಷಿಣ ವಾಗಿ 12 ಅಡಿ ಅಗಲ (ಪೂರ್ವ ಪಶ್ಚಿಮ) ಹಾಗೂ ಸುಮಾರು 710 ಅಡಿ ಉದ್ದ (ಉತ್ತರ ದಕ್ಷಿಣ) ವಿಸ್ತೀರ್ಣದ ದಾರಿ ಅಸ್ತಿತ್ವದಲ್ಲಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ದಾವ ಅದಿಸೂಚಿ 1ನೇ ಸ್ವತ್ತಿನಲ್ಲಿ ದಾರಿ ಇದೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ದಾವ ಅದಿಸೂಚಿ 2 ಮತ್ತು 3ನೇ ಸ್ವತ್ತಿನಲ್ಲಿ ನಾನು ಹೇಳುವಂತೆ ದಾರಿ ಇದೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

2. ನನಗೆ ಸೇರಿದ ಜಮೀನಿನ ಸರ್ವೇ ನಂಬರ್ 83 ಆಗಿರುತ್ತದೆ. ನಿಡಿ 1 ರಿಂದ 11 ಪಹಣಿಗಳಲ್ಲಿ ತೋರಿಸಿರುವ ಆಸ್ತಿಗಳ ದಕ್ಷಿಣ ದಿಕ್ಕಿನಲ್ಲಿ ರಸ್ತೆ ಇದ್ದು ಅದು ಬೆಂಗಳೂರು ನೀಲಗಿರಿ (ಬಿ.ಎನ್) ರಸ್ತೆಯಾಗಿರುತ್ತದೆ ಎಂದರೆ ಸರಿಯಲ್ಲ. ನಿಡಿ 1 ರಿಂದ 11 ಪಹಣಿಗಳಲ್ಲಿ ತೋರಿಸಿರುವ ಜಮೀನುಗಳಿಗೆ ಬೆಂಗಳೂರು ನೀಲಿಗಿರಿ (ಬಿ.ಎನ್) ರಸ್ತೆಯಿಂದ ಸರ್ವೇ ನಂಬರ್ 90 ರಲ್ಲಿ ಪೂರ್ವಾಭಿಮುಖವಾಗಿ ರಸ್ತೆ ಸಂಪರ್ಕ ಇದೆ ಎಂದರೆ ಸರಿಯಲ್ಲ. ಆ ಬಗ್ಗೆ ಬೇಗೂರು ಗ್ರಾಮ ನಕಾಶೆಯಲ್ಲಿ ಮತ್ತು ಸರ್ವೇ ದಿಶಾಂಕ್ ನಲ್ಲಿ ಗುರುತಿಸಲ್ಪಟ್ಟಿದೆ ಎಂದರೆ ಸರಿಯಲ್ಲ. ದಾವ ಆಸ್ತಿಗಳಲ್ಲಿ ನಾನು ಹೇಳುವಂತೆ ಯಾವುದೇ ರಸ್ತೆ ಅಸ್ತಿತ್ವದಲ್ಲಿ ಇಲ್ಲದೇ ಇದ್ದರೂ ಸಹ ವಾದಿಗಳಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳಿಗೆ ಸೇರಿದ ದಾವ ಆಸ್ತಿಯಲ್ಲಿ ತಿರುಗಾಡಲು ನನಗೆ ಯಾವುದೇ ಅನುಭೋಗ ದಾರಿಗೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ ಅನಾವಶ್ಯಕವಾಗಿ ತೊಂದರೆ ಕೊಡುತ್ತಿದ್ದೇನೆ

ಎಂದರೆ ಸುಳ್ಳು . ಈ ದಾವ ದಾಖಲಿಸುವ ಸಮಯದಲ್ಲಿ ನನ್ನ ವಿರುದ್ಧ ವಾದಿಗಳು ಪೊಲೀಸರಿಗೆ ದೂರು ನೀಡಿದ್ದರು ಎಂದರೆ ಸುಳ್ಳು . ಆ ಬಗ್ಗೆ ನಾನು ಪೊಲೀಸ್ ಠಾಣೆಯಲ್ಲಿ ವಾದಿಗಳ ತಂಟೆಗೆ ಹೋಗುವುದಿಲ್ಲ ಎಂದು ಮುಚ್ಚಳಿಕೆ ಬರೆದುಕೊಟ್ಟಿದ್ದೇನೆ ಎಂದರೆ ಸುಳ್ಳು.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ